157ನೇ (99)
LHR

**ಪ್ರಶ್ನೆ: ಸಿಲಿಕಾನ್ ಸಿಟಿ ಸೇರಿದಂತೆ, ರಾಜ್ಯಾದ್ಯಂತ ಮರ ಇಲ್ಲವೇ ಕೊಂಬೆಗಳು ಬಿದ್ದು, ಸಾರ್ವಜನಿಕರಿಗೆ ಗಂಭೀರ ಗಾಯಗಳಾಗಿ ಆಸ್ಪತ್ರೆಗೆ ದಾಖಲಾಗುವ, ಅಂಗವೈಕಲ್ಯಕ್ಕೆ ತುತ್ತಾಗುವ ಹಾಗೂ ಸಾವನ್ನಪ್ಪುವ ಘಟನೆಗಳು ಜರುಗುತ್ತಿದ್ದು, ರಾಜ್ಯ ಹೈಕೋರ್ಟ್ ನಿರ್ದೇಶನದಂತೆ, ಇಂತಹ ಪ್ರಕರಣಗಳನ್ನು ಅಪಘಾತಗಳೆಂದು ಪರಿಗಣಿಸಿ ಸೂಕ್ತ ಪರಿಹಾರವನ್ನು ನೀಡುವುದು ಹಾಗೂ ಮಳೆಗಾಳಿಗೆ ಬೀಳಬಹುದಾದ ಮರಗಳಿಂದ ವಿದ್ಯುತ್ ಕಂಬಗಳು ನೆಲಕ್ಕುರುಳಿ ಸಂಭವಿಸುವ ಅನಾಹುತಗಳು, ಮನೆ, ವಾಹನಗಳ ಮೇಲೆ ಬಿದ್ದು ಸಂಭವಿಸಬಹುದಾದ ಅಪಾರ ನಷ್ಟವನ್ನು ತಡೆಗಟ್ಟುವ ಕಾರಣ ರಾಜ್ಯಾದ್ಯಂತ ರಸ್ತೆ ಬದಿಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಮರಗಳ ಬಗ್ಗೆ ಸಮೀಕ್ಷೆ ನಡೆಸಿ ತೆರವುಗೊಳಿಸಲು ಕ್ರಮ ಕೈಗೊಳ್ಳುವ ಕುರಿತು ನಿಯಮ 72 ರಡಿಯಲ್ಲಿ ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯುವ ಬಗ್ಗೆ.**

**ಉತ್ತರ:**

ರಾಜ್ಯದಲ್ಲಿ ರಸ್ತೆ ಬದಿ ನಿಂತ ಮರಗಳು ಅಥವಾ ಮರದ ಕೊಂಬೆಗಳು ಬೀಳುವ ಕಾರಣದಿಂದ ಮಾನವ ಪ್ರಾಣ ಹಾನಿ ಅಥವಾ ಗಾಯಗೊಳ್ಳುವ ಪ್ರಕರಣಗಳಲ್ಲಿ ಪೀಡಿತರಿಗೆ ಸರ್ಕಾರದಿಂದ ನೇರವಾಗಿ ಪರಿಹಾರವನ್ನು ಮಂಜೂರು ಮಾಡಲು ಪ್ರಸ್ತುತ ವ್ಯವಸ್ಥೆ ಇರುವುದಿಲ್ಲ. ಇಂತಹ ಪ್ರಕರಣಗಳಲ್ಲಿ case to case ಆಧಾರದ ಮೇಲೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳು ಅಥವಾ ಇತರೆ ಇಲಾಖೆ/ಸಂಸ್ಥೆಗಳು ಅಥವಾ ವಿಮೆ ಯೋಜನೆಗಳ ಮೂಲಕ ಪರಿಹಾರವನ್ನು ಪಾವತಿಸಲಾಗುತ್ತಿದೆ.

ಮುಂದುವರೆದು, ಇಂತಹ ಪ್ರಕರಣಗಳಲ್ಲಿ ಪೀಡಿತರಿಗೆ ಪರಿಹಾರ ನೀಡುವ ವಿಷಯದ ಕುರಿತು ಸಂಬಂಧಿಸಿದ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು (Local Bodies) ಮತ್ತು ಇತರೆ ಸಂಸ್ಥೆಗಳೊಂದಿಗೆ ಪರಾಮರ್ಶಿಸಿ ಪೀಡಿತರಿಗೆ ಪರಿಹಾರವನ್ನು ನೀಡಲು ಸೂಕ್ತ ಔಪಚಾರಿಕ ವ್ಯವಸ್ಥೆಯನ್ನು ಕಲ್ಪಿಸಬೇಕಾಗುತ್ತದೆ. ರಾಜ್ಯದಲ್ಲಿ ವಿವಿಧ ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಮತ್ತು ರಸ್ತೆ ಬದಿ ನಿಂತ ಮರಗಳು ಒಣಗಿದರೆ ಅಥವಾ ರೋಗಸ್ಥ ಮರವಾಗಿದ್ದಲ್ಲಿ ಅಥವಾ ಗಾಳಿಯಿಂದ ಬಿದ್ದಿದಲ್ಲಿ ಅಥವಾ ಪ್ರಾಣ/ಸ್ವತ್ತಿಗೆ ಅಪಾಯವಾಗಿದ್ದಲ್ಲಿ ಅಥವಾ ರಸ್ತೆ ಸಂಚಾರಕ್ಕೆ ಅಡ್ಡವಾಗಿದ್ದಲ್ಲಿ ಅಥವಾ ಬೆಂಕಿ/ ಸಿಡಿಲು/ ಮಳೆ ಅಥವಾ ಇತರೆ ಕಾರಣಗಳಿಂದಾಗಿ ಮರಗಳನ್ನು ಕತ್ತಾವಣೆ ಮಾಡಲು ಕರ್ನಾಟಕ ಮರ ಸಂರಕ್ಷಣಾ ಕಾಯ್ದೆ, 1976ರ ಕಲಂ 8ರಡಿ ಅನುಮತಿ ನೀಡಲು ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ, ಅಂತಹ ಮರವನ್ನು ಕತ್ತಾವಣೆ ಮಾಡಲು ಸಂಬಂಧಿಸಿದ ಮರ ಅಧಿಕಾರಿ (Tree Officer) ಕಡ್ಡಾಯವಾಗಿ ಅನುಮತಿ ನೀಡಬೇಕೆಂದು ಈಗಾಗಲೇ ಸದರಿ ಕಾಯ್ದೆಯ ಕಲಂ 8(3)ರ ನಿಯಮದಲ್ಲಿ ಅವಕಾಶವಿರುತ್ತದೆ.

ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಇಂತಹ ಮರಗಳನ್ನು ಗುರುತಿಸಲು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳು (Local Bodies) ಹಾಗೂ ಸಾರ್ವಜನಿಕ ರಸ್ತೆ ಬದಿಗಳಲ್ಲಿ ಇಂತಹ ಮರಗಳನ್ನು ಗುರುತಿಸಲು ಸಂಬಂಧಿಸಿದ ಇಲಾಖೆಗಳಾದ ಲೋಕೋಪಯೋಗಿ ಇಲಾಖೆ, ಗ್ರಾಮೀಣ ಪಂಚಾಯತ್ ರಾಜ್ ಇಲಾಖೆ, ಆರಕ್ಷಕ ಇಲಾಖೆ, ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆ ಹಾಗೂ ಜಿಲ್ಲಾ ಆಡಳಿತವು ಅರಣ್ಯ ಇಲಾಖೆಯೊಂದಿಗೆ ಸಮನ್ವಯ ಮೂಲಕ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಇದರಿಂದಾಗಿ ಇಂತಹ ದುರ್ಘಟನೆಗಳನ್ನು ತಪ್ಪಿಸಲು ಅನುಕೂಲವಾಗುತ್ತದೆ.

**ಸಂಖ್ಯೆ: ಅಪಜೀ 89 ಎಫ್ ಎಸ್ ಡಬ್ಲ್ಯೂ 2025**

**(ಈಶ್ವರ ಬಿ. ಖಂಡ್ರೆ)**
ಮಾನ್ಯ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಸಚಿವರು